ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಸಾಲಾರ್‌ಜಂಗ್ ಸಕ್ಕರೆ ಕಾರ್ಖಾನೆಗೆ ೧೯೭೧ ಎಕರೆ ೨೬ ಗುಂಟೆ ಜಮೀನು ಮಂಜೂರಾಗಿದೆ ಶ್ರೀ ಸುಶೀಲ ಕುಮಾರ ಮೊರಾರ್ಕ್ ಇದರ ಮಾಲೀಕರು.

ಆ) ೧೯೭೧ ಎಕರೆ ೨೬ ಗುಂಟೆ ಜಮೀನನ್ನು ಸಕ್ಕರೆ ಕಾರ್ಖಾನೆಗೆ ವಿಾಸಲಿಡಲಾಗಿದೆ. ೧೦೦೦ ಎಕರೆ ಜಮೀನನ್ನು ಕಬ್ಬು ಬೆಳೆಯಲು ವಿಾಸಲಿಡಲಾಗಿದೆ.

ಇ) ಹೌದು. ೩೬೫ ಜನ ಕಾರ್ಮಿಕರಿಗೆ ಕೆಲಸವಿಲ್ಲವಾಗಿದೆ.

ಈ) ಹೌದು.

ಉ) ಕರ್ನಾಟಕ ಉಚ್ಚನ್ಯಾಯಾಲಯ ಹಾಗೂ ಸರ್ವೋಚ್ಚನ್ಯಾಯಾಲಯಗಳು ತಡೆಯಾಜ್ಞೆ ನೀಡಿರುವುದರಿಂದ ಸರ್ಕಾರ ಈ ಬಗ್ಗೆ ಯಾವ ಕ್ರಮವನ್ನೂ ಕೈಗೊಂಡಿಲ್ಲ.

ಮುಜರಾಯಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿಯವರ ಬಗ್ಗೆ

೮೭(೨೦೮) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಮುಜರಾಯಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಮುಜರಾಯಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿಗಳ ಸಂಖ್ಯೆ ಎಷ್ಟು?

ಆ) ಇವರನ್ನು ಖಾಯಂಗೊಳಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಕೆ. ಅಮರನಾಥಶೆಟ್ಟಿ (ಧಾರ್ಮಿಕ ಮತ್ತು ಧರ್ಮಿ ಮಂತ್ರಿಗಳು).—

ಅ) ಒಂದು.

ಆ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಗೂಲಿ ಆಧಾರದ ಮೇಲಿರುವ ಕಲಸಗಾರರು ತಮ್ಮ ಸೇವೆಯನ್ನು ಖಾಯಂಗೊಳಿಸುವಂತೆ ಮತ್ತು ವೇತನ ಶ್ರೇಣಿ ಮುಂತಾದ ಸೇವಾ ಸೌಲಭ್ಯವನ್ನು ನೀಡುವಂತೆ ಆದೇಶ ಕೋರಿ ಸರ್ವೋನ್ನತ ನ್ಯಾಯಾಲಯದಲ್ಲಿ ರಿಟ್‌ಅರ್ಜಿಯಿದೆ. ಈ ವಿಷಯದಲ್ಲಿ ನ್ಯಾಯಾಲಯದ ತೀರ್ಪನ್ನು ಕಾಯುತ್ತಿರಲಾಗುತ್ತಿದೆ.

ಮೈಸೂರು ಜಿಲ್ಲೆಯಲ್ಲಿ ತೀವ್ರ ಬರಗಾಲ ಪರಿಸ್ಥಿತಿ ಬಗ್ಗೆ

೯೦(೧೮೧) ಶ್ರೀಮತಿ ಮುಕ್ತರುನ್ನೀಸಾ (ನರಸಿಂಹರಾಜ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕಳೆದ ನಾಲ್ಕು ವರ್ಷಗಳಿಂದ ಮೈಸೂರು ಜಿಲ್ಲೆಯಲ್ಲಿ ತೀವ್ರ ಬರಗಾಲ ಪರಿಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅಭಾವ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಸರ್ಕಾರವು ತೆಗೆದು ಕೊಂಡಿರುವ ಕ್ರಮಗಳು ಏನು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಹೌದು.

ಆ) ಅಭಾವ ಪೀಡಿತ ಪ್ರದೇಶಗಳಲ್ಲಿ ಸರ್ಕಾರವು ಈ ಕೆಳಕಂಡ ಪರಿಹಾರ ಕ್ರಮಗಳನ್ನು ತೆಗೆದು ಕೊಳ್ಳಲು ಸಂಬಂಧಪಟ್ಟವರಿಗೆ ಈಗಾಗಲೇ ಸೂಚನೆ ನೀಡಲಾಗಿದೆ.

೧) ಕೆಲಸ ಅರಸಿ ಬರುವ ಪ್ರತಿ ಒಬ್ಬರಿಗೂ ಕೆಲಸವನ್ನು ಒದಗಿಸಿಕೊಡುವುದು.

೨) ಸಾಕಷ್ಟು ಕುಡಿಯುವ ನೀರಿನ ಸರಬರಾಜು ಮಾಡುವುದು.

೩) ಜಾನುವಾರುಗಳಿಗೆ ಮೇವು ಒದಗಿಸುವುದು ಮತ್ತು ಗೋಶಾಲೆಗಳನ್ನು ತೆರೆಯುವುದು.

೪) ರೈತರಿಗೆ ಕೃಷಿ ಸಾಮಗ್ರಿ (ಮಿನಿಕಿಟ್ಸ್) ಚೀಲಗಳ ವಿತರಣೆ ಮಾಡುವುದು.

ರಾಜ್ಯದಲ್ಲಿ ಉದ್ಭವವಾಗಿರುವ ಪರಿಸ್ಥಿತಿಯ ಬಗ್ಗೆ

೯೧ (೨೧) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಉದ್ಭವವಾಗಿರುವ ಬರ ಪರಿಸ್ಥಿತಿಯನ್ನು ಎದುರಿಸಲು ರಾಜ್ಯ ಸರ್ಕಾರವು ತೆಗೆದುಕೊಂಡ ವಿಶೇಷ ಕಾರ್ಯಕ್ರಮಗಳೇನು ?

ಆ) ಮೇವಿನ ಆಹಾರವನ್ನು ಜಿಲ್ಲೆಗಳಲ್ಲಿ ದಾಸ್ತಾನು ಮಾಡುವ ಬಗ್ಗೆ ಸರ್ಕಾರದವರು ತೆಗೆದು ಕೊಂಡಿರುವ ಕ್ರಮಗಳೇನು ?

ಇ) ಕಳೆದ ಸಾಲಿನಲ್ಲಿ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಒದಗಿಸಿ ಕೊಟ್ಟ ಸಹಾಯ ಧನವನ್ನು ಸರಿಯಾಗಿ ವ್ಯಯ ಮಾಡಿಲ್ಲವೆಂಬುದು ನಿಜವೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

೧) ಕೆಲಸವನ್ನು ಅರಿಸಿ ಬರುವ ಪ್ರತಿ ವ್ಯಕ್ತಿಗೂ ಕೆಲಸವನ್ನು ಒದಗಿಸುವುದು.

೨) ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಸಾಕಷ್ಟು ಕುಡಿಯುವ ನೀರಿನ ಸರಬರಾಜು ಮಾಡುವುದು.

೩) ಜಾನುವಾರುಗಳಿಗಾಗಿ ಸಾಕಷ್ಟು ಮೇವಿನ ಸರಬರಾಜು ಮಾಡುವುದು.

೪) ಅಭಾವ ಪೀಡಿತ ಪ್ರದೇಶಗಳಿಗೆ ಸಾಕಷ್ಟು ಆಹಾರ ಧಾನ್ಯಗಳನ್ನು ಒದಗಿಸುವುದು.

೫) ರೈತರಿಗೆ ಕೃಷಿ ಸಾಮಾಗ್ರಿ (ಮಿನಿ ಕಿಟ್ಸ್) ಚೀಲಗಳನ್ನು ಹಂಚುವುದು.

ಆ) ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳಿಗೂ ಅಭಾವ ಪೀಡಿತ ಜಿಲ್ಲೆಗಳಲ್ಲಿ ಮೇವಿನ ಬ್ಯಾಂಕು ಗಳನ್ನು ತೆರೆದು ಅಲ್ಲಿ ಸಾಕಷ್ಟು ಮೇವಿನ ದಾಸ್ತಾನು ಶೇಖರಿಸಿ ಇಡಲಾಗಿದೆ ಹಾಗೂ ಅಗತ್ಯ ಇರುವ ಕಡೆಗಳಲೆಲ್ಲಾ ಗೋಶಾಲೆಗಳನ್ನು ತೆರೆಯಬೇಕೆಂದು ಸೂಚನೆ ನೀಡಲಾಗಿದೆ.

ಇ) ನಿಜವಲ್ಲ.

ಈ ರಾಜ್ಯದ ಹಜ್‌ಯಾತ್ರೀಕರ ಸೀಟಿನ ಸಂಖ್ಯೆಯ ಬಗ್ಗೆ

೯೪ (೧೬೪) ಶ್ರೀ ಆರ್. ರೋಶನ್ ಬೇಗ್ (ಶಿವಾಜಿನಗರ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ವಾಯು ಮತ್ತು ಸಮುದ್ರ ಮುಖಾಂತರ ಹಜ್ ಯಾತ್ರೆಗೆ ಹೋಗ ಬಯಸಿ ೧೯೮೫, ೧೯೮೬ ಮತ್ತು ೧೯೮೭ ರಲ್ಲಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ?

ಆ) ಇವುಗಳಲ್ಲಿ ಮಂಜೂರಾದ ಅರ್ಜಿಗಳ ಸಂಖ್ಯೆ ಎಷ್ಟು ?(ವರ್ಷಾನುಸಾರ ಸಂಖ್ಯೆ ಕೊಡಬೇಕು)